ದಿನಾಂಕ: 20-11-2025 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು : ಎದುರುದಾರ ಪರ ಶ್ರೀ ಟಿ.ಎಂ.ಎಸ್ ವಕೀಲರಿಂದ,**

ಈ ಅರ್ಜಿಯನ್ನು ನಾನು ಹೊಲಕ್ಕೆ ಸಂಬಂಧಿಸಿದಂತೆ ಹಾಕಿರುತ್ತೇನೆ. ಎದುರುದಾರರು ಮೊದಲು ದಾವೆ ಹಾಕಿದ್ದರು ಎಂದು ನುಡಿಯುತ್ತಾರೆ. ಮೂಲ ದಾವೆಯಲ್ಲಿ ನಮಗೆ ನೋಟಿಸ್ ಬಂದಿರುವುದಿಲ್ಲ. ನನಗೆ ಮೂಲ ದಾವೆಯಲ್ಲಿ ನೋಟಿಸ್ ಬಂದಿರುತ್ತದೆ ಎಂದರೆ ಸಾಕ್ಷಿಯು ಮೊದಲು ನೋಟಿಸ್ ಗೆ ನಾನು ಸಹಿ ಮಾಡಿರುತ್ತೇನೆ ಆದರೆ ಅವರು ಏನು ಎಂದು ನನಗೆ ಹೇಳಿರುವುದಿಲ್ಲ. ಮೂಲ ದಾವೆಯಲ್ಲಿ ನಮಗೆ ನೋಟಿಸ್ ಮುಟ್ಟಿರುತ್ತದೆ ಎಂದರೆ ಸರಿ. ನೋಟಿಸ್ ಮುಟ್ಟ ನಂತರ ನಾವು ಸದರಿ ಮೂಲ ದಾವೆಯಲ್ಲಿ ಹಾಜರಾಗಿ ಪ್ರಕರಣದಲ್ಲಿ ಭಾಗಿಯಾಗಿರುತ್ತೇವೆ.

ವಾದಿ ಹಾಕಿರುವ ದಾವೆ ಸರಿ ಇರುವುದಿಲ್ಲ. ನಾನು ಹಾಕಿರುವ ಈ ಅರ್ಜಿ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ಹಾಕಲು 24 ತಿಂಗಳು ಯಾಕೇ ತಡವಾಯಿತು ಎಂದರೆ ಸಾಕ್ಷಿಯು ಲಾಕ್‌ಡೌನ್ ಇತ್ತು ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನಗೆ ಮೂಲ ದಾವೆಯ ಬಗ್ಗೆ ಎಲ್ಲ ಮಾಹಿತಿ ಇರುತ್ತದೆ, ಆದರೂ ಸಹ ನಾನು ಆ ಪ್ರಕರಣದಲ್ಲಿ ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. ಮೂಲ ದಾವಾ ನಂಃ 135/2019 ನ್ನು ಮತ್ತೇ ಮರುವಿಚಾರಣೆಗಾಗಿ ಯಾವುದೇ ಸೂಕ್ತ ಕಾರಣ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ಎಫ್.ಡಿ.ಪಿ ನಂಃ1/2021 ರಲ್ಲಿ ಹಾಕಿರುವ ಅರ್ಜಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹಾಕಿರುವ ದಾಖಲೆಯ ಪ್ರಕಾರ ನನಗೆ ಮೂಲ ದಾವೆ ನಂಃ130/2019 ರ ಬಗ್ಗೆ ನನಗೆ ಎಲ್ಲಾ

ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಸರಿಯಾದ ಕಾರಣ ಮತ್ತು ವಿವರಗಳು ನೀಡಿರುವುದಿಲ್ಲ ಹಾಗಾಗೀ ಈ ಅರ್ಜಿ ಉರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.